C.Misc No.215/2023
R.W.:1

ಈ ದಿನ ದಿಃ18.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ- ಅರ್ಜಿದಾರರ ಪರ ವಕೀಲರಾದ ಶ್ರೀ ಎ.ಜಿ.ಆರ್ ರವರಿಂದಃ-**

1. ನಾನು 9ನೇ ತರಗತಿಯವರೆ ವ್ಯಾಸಂಗ ಮಾಡಿರುತ್ತೇನೆ. ನಾನು ಕುರುಬರಹಳ್ಳಿಯಲ್ಲಿ ವಾಸವಾಗಿರುತ್ತೇನೆ. ನಾನು ಬಿಸ್ಕೆಟ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನನಗೆ ತಿಂಗಳಿಗೆ 17ಸಾವಿರ ಸಂಬಳ ಬರುತ್ತಿದೆ. 17ಸಾವಿರ ರೂಪಾಯಿ ಸಂಬಳ ಬರುತ್ತದೆ ಎಂದು ತೋರಿಸಲು ನಾನು ಯಾವುದೇ ದಾಖಲೆ ಕೊಟ್ಟಿಲ್ಲ. ನನಗೆ ಈಗ 20ಸಾವಿರಕ್ಕೂ ಅಧಿಕ ಮೊತ್ತದ ಸಂಬಳ ಪ್ರತಿತಿಂಗಳಿಗೆ ಬರುತ್ತಿದ್ದರು ಕೇವಲ 17ಸಾವಿರ ರೂಪಾಯಿ ಬರುತ್ತಿದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಜಮೀನು ಇದೆ ಎಂದರೆ ಸಾಕ್ಷಿಯು ನನಗೆ ಇದ್ದ ಜಮೀನನ್ನು ಈಗಾಗಲೇ ನನ್ನ ಮಗಳಿಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಮಗಳಿಗೆ 10ಗುಂಟೆ ಜಮೀನು ಕೊಟ್ಟಿರುತ್ತೇನೆ. ಸದರಿ 10ಗುಂಟೆ ಜಮೀನಿನಲ್ಲಿ ಯಾವುದೇ ಬೆಳೆ ಬೆಳೆಯಲು ಸಾಧ್ಯವಿಲ್ಲ ಎಂದರೆ ಸಾಕ್ಷಿಯು ಆದರಲ್ಲಿ 20 ತೆಂಗಿನಮರಗಳು ಇವೆ ಎಂದು ನುಡಿಯುತ್ತಾರೆ. 10ಗುಂಟೆ ಜಮೀನಿನಲ್ಲಿ 20 ತೆಂಗಿನಮರಗಳನ್ನು ಹಾಕಲು ಸಾಧ್ಯವಿಲ್ಲ, ಹಾಗಾಗಿ ನಾನು 20 ತೆಂಗಿನ ಮರಗಳು ಇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 20 ತೆಂಗಿನಮರಗಳು ಇವೆ ಎಂದು ತೋರಿಸಲು ದಾಖಲೆ ಕೊಟ್ಟಿಲ್ಲ.

ಸದರಿ ತೆಂಗಿನಮರಗಳು ಮಳೆ ಆಧಾರಿತ ತೆಂಗಿನಮರಗಳ ಅಥವಾ ನೀರಾವರಿ ತೆಂಗಿನಮರಗಳ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅವು ನೀರಾವರಿ ತೆಂಗಿನಮರಗಳು ಎಂದು ನುಡಿಯುತ್ತಾರೆ. ತೆಂಗಿನಮರಗಳಲ್ಲಿ ಬರುತ್ತಿರುವ ಫಸಲನ್ನು ನಾವೇ ತೆಗೆದುಕೊಂಡು ಅದರಿಂದ ಆದಾಯ ಪಡೆದುಕೊಳ್ಳುತ್ತಿದ್ದೇವೆ ಎಂದರೆ ಸರಿಯಲ್ಲ. ತೆಂಗಿನಮರಗಳಿಂದ ಬರುವ ಆದಾಯವನ್ನು ನಾನೇ ತೆಗೆದುಕೊಂಡು ನನ್ನ ಸ್ವಂತಕ್ಕೆ ಬಳಸಿಕೊಳ್ಳುತ್ತಿದ್ದರು ಬಳಸಿಕೊಳ್ಳುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನ್ನ ಹೆಂಡತಿ ಮರಣ ಹೊಂದಿದ ನಂತರದಿಂದಲೂ ನನ್ನ ಮಗಳು ನನ್ನ ಅತ್ತೆಯೊಂದಿಗೆ ವಾಸವಿದ್ದಾಳೆ ಎಂದರೆ ಸರಿ. ನನ್ನ ಮಗಳ ಪಾಲನೆ ಪೋಷಣೆ ಮತ್ತು ವಿದ್ಯಾಭ್ಯಾಸ ಎಲ್ಲವನ್ನು ನನ್ನ ಅತ್ತೆಯವರೆ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. ನನ್ನ ಮಗಳು ಗುರುಕುಲ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾಳೆ. ನನ್ನ ಮಗಳು ಈಗ 4ನೇ ತರಗತಿ ವ್ಯಾಸಂಗ ಮಾಡುತ್ತಿದ್ದಾಳೆ. ಈಗ ಸದ್ಯಕ್ಕೆ ನನ್ನ ಮಗಳು ಎನ್.ಆರ್ ಶಾಲೆ, ಹರಿನಗರ ಬೆಂಗಳೂರಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಳೆ ಎಂದರೆ ನನಗೆ ಗೊತ್ತಿಲ್ಲ. ಯಾವುದೇ ಮಗುವಿಗೆ ಪ್ರತಿತಿಂಗಳು ಬಸ್ಸಿನ ಖರ್ಚು, ಟ್ಯೂಷನ್ ಖರ್ಚು ಮತ್ತು ಶಾಲಾ ಶುಲ್ಕ ಎಲ್ಲವೂ ಸೇರಿ ಪ್ರತಿತಿಂಗಳು 10 ರಿಂದ 12ಸಾವಿರ ರೂಪಾಯಿ ಖರ್ಚಾಗುತ್ತದೆ ಎಂದರೆ ಸರಿ. ಸದರಿ ಖರ್ಚನ್ನು ನನ್ನ ಅತ್ತೆಯವರೆ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸಾಕ್ಷಿಯು ಶಾಲಾ ಶುಲ್ಕವನ್ನು ನಾನೇ

ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

3. ನಾನು ಈ ಅರ್ಜಿಯಲ್ಲಿ ಮಧ್ಯಂತರ ಆದೇಶವಾದಂತೆ ಮಾತ್ರ ಅರ್ಜಿದಾರರಿಗೆ ಜೀವನಾಂಶದ ಹಣ ಕೊಟ್ಟಿರುತ್ತೇನೆ ಎಂದರೆ ಸಾಕ್ಷಿಯು ಅದಕ್ಕಿಂತಲ್ಲೂ ಹೆಚ್ಚು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಶಾಲಾ ಶುಲ್ಕ ಕಟ್ಟಿದ್ದೇನೆ ಎಂದು ತೋರಿಸಲು ನೀವು ರಶೀದಿಗಳನ್ನು ಹಾಜರುಪಡಿಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಹಣವನ್ನು ನ್ಯಾಯಾಲಯದ ಮುಂದೆ ಇದೇ ಪ್ರಕರಣದಲ್ಲಿ ಅರ್ಜಿದಾರರಿಗೆ ಶಾಲಾಶುಲ್ಕದ ಬಾಬ್ತು ಎಂದು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಶಾಲಾಶುಲ್ಕಕ್ಕೆಂದೆ ಹಣವನ್ನು ಕೊಟ್ಟಿಲ್ಲ, ಈ ಪ್ರಕರಣದಲ್ಲಿ ಮಧ್ಯಂತರ ಅರ್ಜಿಯ ಮೇಲಾದ ಆದೇಶದ ಮೇರೆಗೆ ಹಣವನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

4. ಅರ್ಜಿದಾರರು ಎಷ್ಟು ಮೊತ್ತದ ಜೀವನಾಂಶ ಕೋರಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆಂದು ನನಗೆ ಗೊತ್ತಿಲ್ಲ. ನಾನು ಈ ಪ್ರಕರಣದಲ್ಲಿ ವಕೀಲರ ಮೂಲಕ ಯಾವುದೇ ತಕರಾರು ಹಾಕಿಸಿಲ್ಲ. ನನ್ನ ಮಗುವನ್ನು ಸಾಕುವಂತಹ ಶಕ್ತಿ ನನಗೆ ಇದೆ ಎಂದರೆ ಸಾಕ್ಷಿಯು ನನ್ನ ಮಗಳನ್ನು ನನ್ನೊಂದಿಗೆ ಕಳುಹಿಸಿದರೆ ನಾನೇ ಸಾಕುತ್ತೇನೆ ಎಂದು ನುಡಿಯುತ್ತಾರೆ. ನನ್ನ ಮಗಳನ್ನು ನನಗೆ ಕೊಡಿ ಎಂದು ನಾನು ಇದುವರೆಗೂ ಯಾವುದೇ ಅರ್ಜಿಯನ್ನು ಸಲ್ಲಿಸಿಲ್ಲ. ನನ್ನ ಮಗಳನ್ನು ಈಗಲೂ

ಸಹ ನನ್ನ ಅತ್ತೆಯವರೆ ನೋಡಿಕೊಳ್ಳುತ್ತಾರೆ ಎಂದರೆ ಸಾಕ್ಷಿಯು ನಾನು ಸಹ ನೋಡಿಕೊಳ್ಳುತ್ತಿದ್ದೇನೆ ಎಂದು ನುಡಿಯುತ್ತಾರೆ. ಅರ್ಜಿದಾರರಿಗೆ ಪ್ರತಿತಿಂಗಳು 20ಸಾವಿರ ರೂಪಾಯಿ ಜೀವನಾಂಶ ಕೋಡಲು ಅರ್ಹತೆ ಇದೆ ಎಂದರೆ ಸರಿಯಲ್ಲ. ನನಗೆ ಬೇರೇ ಬೇರೆ ಮೂಲಗಳಿಂದ ಪ್ರತಿತಿಂಗಳಿಗೆ ಒಂದು ಲಕ್ಷಕ್ಕೂ ಅಧಿಕ ಮೊತ್ತದ ಆದಾಯ ಇದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪ್ರತಿತಿಂಗಳು 20 ಸಾವಿರ ರೂಪಾಯಿ ಜೀವನಾಂಶ ಕೋಡುವ ಅರ್ಹತೆ ಇದ್ದರು ಅರ್ಹತೆ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**